
# ಮಿಂಚು–ಮೊಗ್ಗಿನ ಮಾತುಕತೆ

■ ನಿಂಗಮ್ಮ ಭಾವಿಕಟ್ಟಿ, ಹುನಗುಂದ
ಕಲೆ: ಸಂತೋಷ್ ಸಸಿಹಿತ್ಲು



‘ಮಿಂಚು’ ಆ ಪುಟ್ಟ ಹುಡುಗಿಯ ಹೆಸರು. ಒಂದು ವಾರದ ಹಿಂದೆ ಅವಳಮ್ಮನ ಜೊತೆ ಹೋಗಿ ಎರಡು ಕಮಲದ ಹೂವಿನ ಸಸಿಗಳನ್ನು ತಂದಿದ್ದರು. ಅವುಗಳನ್ನು ಒಂದು ಪುಟ್ಟ ತೊಟ್ಟಿಯಲ್ಲಿ ಇಟ್ಟು ಮನೆ ಮುಂದಿನ ಉದ್ಯಾನದಲ್ಲಿರಿಸಿದ್ದರು. ದಿನಾ ರಾತ್ರಿ ಕನಸಲ್ಲಿ ಆ ಕಮಲದ ಮೊಗ್ಗುಗಳು ಅರಳಿದ ಹಾಗೆ ಅನಿಸಿ ಕಣ್ಣರಳಿಸುತಿದ್ದಳು ಮಿಂಚು. ಆ ಕಮಲದ ಮೊಗ್ಗು ಅರಳಲು ಇನ್ನು ನಾಲ್ಕೈದು ದಿನಗಳು ಬೇಕು ಎಂದು ಅಮ್ಮ ಹೇಳಿದ್ದರು. ಹಚ್ಚಿ ನಾಲ್ಕೈದು ದಿನಗಳು ಕಳೆದರೂ ಹೂವು ಕಾಣದ ಮಿಂಚುಗೆ ಅವರಮ್ಮ ನಾಳೆ ಅರಳಬಹುದು ಅಂತ ಹೇಳಿದರು. ಕಾಯುತ್ತಿದ್ದ ಅವಳಿಗೆ ಯಾವಾಗ ಬೆಳಕಾಗುವುದು ಎಂಬ ಕಾತರ. ಬೆಳಿಗ್ಗೆ ಬೇಗ ಎದ್ದು ಹೊರಗೆ ಹೋಗಿ ನೋಡಿದರೆ ಮೊಗ್ಗು ಹಾಗೇ ಇತ್ತು. ‘ಯಾಕೆ ನೀನು ಇನ್ನೂ ಅರಳಿಲ್ಲ? ಎಷ್ಟು ದಿನಗಳಾಯ್ತು ನಾನು ನಿನ್ನ ತಂದು’ ಎಂದು ಹತ್ತಿರ ಬಗ್ಗಿ ಕೇಳಿದಳು. ‘ಸೂರ್ಯ ಬಂದಿಲ್ಲವಲ್ಲ. ಅದಕ್ಕೆ ಅರಳಿಲ್ಲ’ ಮೊಗ್ಗು ಸುಂದರವಾಗಿ ಹೇಳಿತು. ‘ಸೂರ್ಯ ಬರದಿದ್ದರೆ ನೀನು ಅರಳುವುದಿಲ್ಲವೇ ಯಾಕೆ ಹೀಗೆ ಹೇಳ್ತಿಯಾ?’ ಎಂದು ಮರು ಪ್ರಶ್ನೆ ಹಾಕಿದಳು.

‘ಸೂರ್ಯ ನನ್ನ ಶಕ್ತಿ, ಸ್ಫೂರ್ತಿ. ಅವನು ಬಂದರೆ ನಾನು ಅರಳುವುದು. ಅಷ್ಟೇ ಅಲ್ಲ, ಸೂರ್ಯ ಬರುವುದರಿಂದಲೇ ಎಲ್ಲಾ ಜಗದ ಕಾರ್ಯ ಶುರುವಾಗುವುದು’ ಎಂದಿತು ಕಮಲದ ಮೊಗ್ಗು. ‘ಹೇಗೆ?’ ಮಿಂಚು ತನಗೆ ಆದ ಆಶ್ಚರ್ಯವನ್ನು ವ್ಯಕ್ತಪಡಿಸಿದಳು. ‘ಸೂರ್ಯ ಬರದಿದ್ದರೆ ನೀನು ಏಳುವುದಿಲ್ಲ, ಯಾರೂ ಏಳುವುದಿಲ್ಲ ಅಲ್ಲವೇ?’ ಎನ್ನುವುದು ಕಮಲದ ಪ್ರಶ್ನೆ. ‘ಹೌದು’ ಮಿಂಚು ನೆನಪಿಸಿಕೊಂಡು ಅಂದಳು. ‘ಸೂರ್ಯ ಬರುವುದರಿಂದಲೇ ಹಕ್ಕಿಗೆ ಹಸಿವು ಆಗುವುದು. ಹೂವಿನ ಜೇನು ಸವಿಯಲು ಬಂದ ಚಿಟ್ಟೆಗಳು ಅತ್ತಿತ್ತ ಹಾರಾಡುವುದರಿಂದ ಹೂವು ಕಾಯಾಗುವುದು. ಸಸಿ ಚಿಗುರುವುದು ಎಲ್ಲವೂ ಸೂರ್ಯ ಬರುವುದರಿಂದಲೇ ನಡೆಯುತ್ತವೆ’ ಎನ್ನುವ ವಿವರವನ್ನು ಕಮಲ ನೀಡುತ್ತಿತ್ತು. ‘ಹೌದಾ! ನಂಗೊತ್ತೇ ಇರಲಿಲ್ಲ’ ಎಂದ ಮಿಂಚು ಓಡಿದಳು.

ಸೀದಾ ಒಳಗೆ ಬಂದು ಇಡ್ಲಿ ಮಾಡುತ್ತಿದ್ದ ಅಮ್ಮನಿಗೆ ‘ಅಮ್ಮ ಕಮಲದ ಮೊಗ್ಗು ಅರಳಿದೆಯಾ ಎಂದು ನೋಡಲು ಹೋಗಿದ್ದೆ. ಇನ್ನೂ ಅರಳಿರಲ್ಲ ನೋಡು’. ಸಪ್ಪೆ ಮುಖ ಮಾಡಿ ಹೇಳಿದಳು. ‘ಸೂರ್ಯನ ಕಿರಣ ತಾಕಿದ ಮೇಲೆಯೇ ಆ ಮೊಗ್ಗು ಅರಳುವುದು ಬಂಗಾರಿ. ಆಮೇಲೆ ನೋಡುವೆಯಂತೆ ಬಾ, ಈಗ ಇಡ್ಲಿ ತಿನ್ನುವೆಯಂತೆ ಮುಖ ತೊಳೆದು ಬಾ’ ಎಂದಳು ಅಮ್ಮ. ‘ಅಮ್ಮಾ, ಸೂರ್ಯ ಹೂವು ಅರಳಿಸಲೆಂದೇ ಬರುತ್ತಾನಾ?’ ಎಂದಳು. ಮುದ್ದು ಮಗಳ ಪ್ರಶ್ನೆಗೆ ಅವಳಮ್ಮ ‘ಅಷ್ಟೇ ಅಲ್ಲ ಬಂಗಾರಿ, ಸೂರ್ಯ ಮೂಡುವುದರಿಂದ ಅವನ ಬಿಸಿಲಿನಿಂದ ನದಿ, ಸಮುದ್ರಗಳ ನೀರು ಆವಿಯಾಗಿ ಮೇಲೆ ಹೋಗಿ ಮೋಡಗಳಾಗಿ ಮಳೆ ಬರುತ್ತದೆ. ಮಳೆಯಿಂದ ಬೆಳೆ, ಬೆಳೆಯಿಂದ ಧಾನ್ಯ, ಧಾನ್ಯಗಳಿಂದಲೇ ನಮ್ಮಗೆಲ್ಲ ಅನ್ನ. ಹಾಗಾಗಿ ಸೂರ್ಯನಿಂದಲೇ ನಾವೆಲ್ಲ ಬದುಕಿರುವುದು. ಅಷ್ಟೇ ಅಲ್ಲ, ಸೂರ್ಯನ ಶಕ್ತಿಯಿಂದ ಈಗ ಗಾಡಿ ಬೈಕು ಕಾರುಗಳು ಓಡುವಂತೆ ಮಾಡಿದ್ದಾರೆ. ಸೌರ ಶಕ್ತಿ ಅಂತಾರಲ್ಲ ಅದೇ’ ಎಂದು ಅವರಮ್ಮ ವಿವರವನ್ನು ನೀಡಿದರು. ‘ಹೌದಾ!’ ಮಿಂಚುವಿಗೆ ಆಶ್ಚರ್ಯ. ‘ಅಷ್ಟೇ ಅಲ್ಲ ಮುದ್ದು ಮರಿ, ಸೂರ್ಯನ ಬೆಳಕಿನಿಂದಲೇ ಈಗ ಅಡುಗೆ ತಯಾರಿಸಬಹುದು. ಅದನ್ನೇ ಸೌರ ಒಲೆ ಅನ್ನುತ್ತಾರೆ. ಅವನನ್ನು ‘ಸೂರ್ಯದೇವ’ ಎಂದು ಹಿಂದಿನಿಂದಲೂ ಕರೆದುಕೊಂಡು ಬಂದಿದ್ದೇವೆ. ಬೆಳಿಗ್ಗೆ ಸೂರ್ಯ ನಮಸ್ಕಾರ ಮಾಡುತ್ತಾರೆ. ನಾವು ಸೂರ್ಯನಿಗೆ ಧನ್ಯವಾದ ಹೇಳಬೇಕು ಅಲ್ಲವೇ?’ ಎಂದರು. ಆಗ ಮಿಂಚು ಹೊರಗೆ ಬಂದು ‘ಥ್ಯಾಂಕ್ಯೂ ಸೂರ್ಯದೇವ’ ಎಂದು ಹೇಳಿದಳು. ಅಷ್ಟರಲ್ಲಿ ಸೂರ್ಯ ಉದಯಿಸುತ್ತಿದ್ದ. ಮತ್ತೊಮ್ಮೆ ಉದ್ಯಾನದತ್ತ ನೋಡಿದಾಗ ಕಮಲದ ಮೊಗ್ಗು ಮೆಲ್ಲಗೆ ಅರಳುತ್ತಿತ್ತು. ಮಿಂಚುವಿನ ನಗುವಿನ ಹಾಗೆ. ಮಿಂಚು ಹೇ ಎಂದು ಕುಣಿದಾಡುತ್ತಾ ಅಮ್ಮನಿಗೆ ಹೇಳಲು ಒಳಗೆ ಹೋದಳು.



ಮರುದಿನ ತನ್ನ ಗೆಳತಿಯರನ್ನೆಲ್ಲ ಕರೆದುಕೊಂಡು ಬಂದು ಅರಳಿದ ಕಮಲವನ್ನು ತೋರಿಸಿ ಖುಷಿ ಪಟ್ಟಳು. ಎಲ್ಲರೂ ಸೇರಿ ಕಮಲದ ಹೂವಿನ ತೊಟ್ಟಿಯ ಸುತ್ತಲೂ ಕುಳಿತು ಹೂವಿನೊಂದಿಗೆ ಮಾತನಾಡಿ ಹರುಷ ಪಟ್ಟರು. ■

